ಎರಡು ಬ್ರಿಡ್ಜ್ ಇವೆ. ಬೆಣ್ಣೆ ಹಳ್ಳದ ಬ್ರಿಡ್ಜ್ ತೊಂದರೆಯಾಗಿ, ಹಿಂದೆ ಒಂದು ಸಲ ಮಳೆ ಬಂದಾಗ ಎಷ್ಟೋ ಜನ ಸತ್ತು ಹೋಗಿದ್ದರು. ಬೆಣ್ಣೆ ಹಳ್ಳದ ಬ್ರಿಡ್ಜ್ ಕಟ್ಟದೆ ಹಾಗೆ ಉಳಿದಿದೆ. ಕುನ್ನೂರು ಹತ್ತಿರ ಒಂದು ಬ್ರಿಡ್ಜ್‌ನ ಎತ್ತರವನ್ನು ಮಾಡತಕ್ಕಂಥದು ಹಾಗೆಯೇ ಇದೆ, ಇದನ್ನು ಮಾಡಬೇಕು. ಆದ್ದರಿಂದ ಈ ರಸ್ತೆಯನ್ನು ತಕ್ಷಣ ನವ ಅಗಲೀಕರಣ ಮಾಡುವುದಕ್ಕೆ ಸರ್ಕಾರ ಇದಕ್ಕೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಜಗದೀಶ್ ಶೆಟ್ಟರ್‌ರವರು ಕೇಳಿರುವ ಕೋರಿಕೆ ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ರಸ್ತೆ ಅಗಲೀಕರಣ ಅತ್ಯಂತ ಅವಶ್ಯಕತೆ ಇದೆ. ಏಕೆಂದರೆ, ಅಲ್ಲಿ ಪ್ರತಿದಿನ ಓಡಾಡುವ ವಾಹನಗಳ ಸಂಖ್ಯೆ 5355 ಅಂದರೆ 9782 ಪಿ.ಸಿ. ಆಗಿರುವುದರಿಂದ, ಆ ರಸ್ತೆಯನ್ನು ಅಗಲೀಕರಣ ಮಾಡಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಎರಡು ಸೇತುವೆಗಳ ಬಗ್ಗೆ ಹೇಳಿದ್ದಾರೆ. ಈಗಾಗಲೇ ನವಲಗುಂದ ಹತ್ತಿರವಿರುವ ಸೇತುವೆಗೆ 5.5 ಕೋಟಿ ರೂಪಾಯಿಗಳ ಅಂದಾಜು ವೆಚ್ಚಕ್ಕಾಗಿ ಇವತ್ತು ಕೇಂದ್ರ ಸರ್ಕಾರದ ಭೂಸಾರಿಗೆ ಸಚಿವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ಟೆಂಡರ್ ಕರೆಯುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಕುನ್ನೂರ್ ಹತ್ತಿರ ಇರುವ ಸೇತುವೆಗೆ ಬೇರೆ ಒಂದು ಯೋಜನೆಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಹುಬ್ಬಳ್ಳಿ, ಬಿಜಾಪುರ ರಸ್ತೆಯನ್ನು ಇವತ್ತು ವಿಶ್ವಬ್ಯಾಂಕ್ ನೆರವಿಗೆ ಸೇರಿಸುವ ಸಲುವಾಗಿ ಪ್ರಸ್ತಾವ ಇದೆ. ಶೀಘ್ರದಲ್ಲಿಯೇ ಹಣಕಾಸಿನ ಲಭ್ಯತೆ ಮೇಲೆ ಈ ರಸ್ತೆ ಅಗಲೀಕರಣ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ವಿಷಯ: ಕುಂದಾಪುರ ಅರಣ್ಯವಿಭಾಗದಲ್ಲಿ ಕಾಡ್ಗಿಚ್ಚಿನಿಂದ ಅರಣ್ಯದ ನಾಶ.

267 (1750)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1. ಕುಂದಾಪುರ ಅರಣ್ಯ ವಿಭಾಗದಲ್ಲಿ ಕಾಡ್ಗಿಚ್ಚಿನಿಂದ ಉಂಟಾಗುವ ಅರಣ್ಯ ನಾಶ ತಡೆಯಲು ಅರಣ್ಯ ಇಲಾಖೆ ತೆಗೆದುಕೊಂಡ ಮುಂಜಾಗ್ರತೆ ಕ್ರಮವೇನು?

2. ಈ ಬಗ್ಗೆ ಕಾದಿರಿಸಿದ ಹಣ ಎಷ್ಟು? ಎಷ್ಟನ್ನು ಖರ್ಚು ಮಾಡಲಾಗಿದೆ? (ವಲಯವಾರು ವಿವರ ನೀಡುವುದು)

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ರಕ್ಷಿತಾರಣ್ಯದ ಗಡಿರೇಖೆಗಳ ಹಾಗೂ ನೆಡುತೋಪುಗಳ ಸುತ್ತಲೂ ಬೆಂಕಿ ಬೀರಿ ಕೆಲಸ ಮಾಡಲಾಗಿದೆ. ಅಲ್ಲದೆ ಬೆಂಕಿ ಕಾವಲುಗಾರರ ತಂಡ ನೇಮಿಸಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡ ಕೂಡಲೇ ಅಲ್ಲಿಗೆ ಬೆಂಕಿ ಕಾವಲುಗಾರರು ಹೋಗಿ ಬೆಂಕಿಯನ್ನು ಆರಿಸಲು ಕ್ರಮ ಕೈಗೊಂಡು

ಅರಣ್ಯ ಬೆಂಕಿಯಿಂದ ಆಗಬಹುದಾದ ಅರಣ್ಯ ನಾಶವನ್ನು ತಡೆಗಟ್ಟಲಾಗುತ್ತಿದೆ.

2. 1997-98ನೇ ಸಾಲಿನಲ್ಲಿ ಕುಂದಾಪುರ ಅರಣ್ಯ ವಿಭಾಗದಲ್ಲಿ ಕಾಡ್ಗಿಚ್ಚಿನಿಂದ ಅರಣ್ಯ ನಾಶ ತಡೆಯಲು ಕಾದಿರಿಸಲಾಗಿದ್ದ ಅನುದಾನದ ಹಾಗೂ ವೆಚ್ಚಗಳ ವಲಯವಾರು ವಿವರಗಳು ಈ ಕೆಳಗಿನಂತಿವೆ:

ವಲಯ	ಅನುದಾನ	ಖರ್ಚು
ಬೈಂದೂರು	42,891	42891
ಕುಂದಾಪುರ	42970	42890
ಉಡುಪಿ	44125	44125
ಶಂಕರನಾರಾಯಣ	34795	34795
ಹೆಬ್ರಿ	72795	72795
ಕಾರ್ಕಳ	34796	34796
ಮೂಡಬಿದ್ರೆ	34795	34795
ವೇಣೂರು	42833	42833
ಒಟ್ಟು	350000	349920

ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ: ಮಾನ್ಯ ಅಧ್ಯಕ್ಷರೇ, ಅರಣ್ಯ ವಿಭಾಗದಲ್ಲಿ ಕಾಡ್ಗಿಚ್ಚು ಉಂಟಾದಾಗ ಅದನ್ನು ತಡೆಗಟ್ಟುವುದಕ್ಕಾಗಿ ಅರಣ್ಯ ಇಲಾಖೆ ಏನೇನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂದು ಕೇಳಿರುವ ಪ್ರಶ್ನೆಗೆ ಬಂದಿರುವ ಉತ್ತರ ಸಮರ್ಪಕವಾಗಿಲ್ಲ. ಇನ್ನು ಎರಡನೆಯ ಪ್ರಶ್ನೆಯಲ್ಲಿ ಇದಕ್ಕಾಗಿ ಮಾಡಿರುವ ಖರ್ಚು ಎಷ್ಟು ಎಂದಿರುವುದಕ್ಕೆ ಬಂದಿರುವ ಉತ್ತರ ಕೂಡ ಸಮರ್ಪಕವಾಗಿಲ್ಲ. ಎಷ್ಟು ಹಣವನ್ನು ಇಟ್ಟಿರುತ್ತಾರೋ ಅಷ್ಟನ್ನೂ ನಿಖರವಾಗಿ ಖರ್ಚು ಮಾಡುತ್ತಾರಂತೆ. ಬೈಂದೂರು ವಲಯಕ್ಕೆ 42,891 ರೂ.ಗಳ ಅನುದಾನವಿದ್ದರೆ ಖರ್ಚು ಕೂಡ 42,891 ರೂ.ಗಳೆಂದು ತೋರಿಸಿದ್ದಾರೆ. ಅದೇ ರೀತಿಯಲ್ಲಿ ಕುಂದಾಪುರ, ಉಡುಪಿ ಹಾಗೂ ಇನ್ನಿತರ ವಲಯಗಳ ಬಗ್ಗೆ ಅವರು ಇದೇ ರೀತಿಯಾಗಿ ಖರ್ಚನ್ನು ತೋರಿಸಿದ್ದಾರೆ. ಅಂದರೆ ಇದರರ್ಥ ಎಷ್ಟು ಹಣವನ್ನು ಕಾದಿರಿಸಿದ್ದಾರೋ ಅಷ್ಟಕ್ಕೆ ಮಾತ್ರ ಖರ್ಚು ಮಾಡಿದ್ದಾರೆ, ಅಂದರೆ ಇವರ ಲೆಕ್ಕಕ್ಕೆ ಸರಿಹೊಂದುವಂತೆ ಹೇಳಿದ್ದೀರಿಯೇ ಹೊರತು ಆ

ಪ್ರಮಾಣದಲ್ಲಿ ಖರ್ಚಾಗಿಲ್ಲ ಮತ್ತು ಕಾಡ್ಗಿಚ್ಚು ಇತ್ತೀಚಿನ ದಿನಗಳಲ್ಲಿ ಉಂಟಾಗಿರತಕ್ಕಂಥದ್ದರ ಬಗ್ಗೆ ಏನಾದರೂ ವರದಿ ಇದೆಯೇ ಅಥವಾ ಯಾವುದೇ ಒಂದು ಗುಂಪಿನವರ ಕೈವಾಡದಿಂದ ಬೆಂಕಿ ಉಂಟಾಗಿರತಕ್ಕಂಥದ್ದರ ಬಗ್ಗೆ ವರದಿ ಇದೆಯೇ ಇದ್ದಲ್ಲಿ ಅವುಗಳನ್ನು ತಡೆಗಟ್ಟುವುದಕ್ಕಾಗಿ ತಾವು ಏನು ಕ್ರಮಗಳನ್ನು ಕೈಗೊಂಡಿದ್ದೀರಿ?

ಶ್ರೀ ಡಿ.ಮಂಜುನಾಥ್: ಸನ್ಮಾನ್ಯ ಅಧ್ಯಕ್ಷರೇ, ಈ ಕುಂದಾಪುರ ಅರಣ್ಯ ವಿಭಾಗದಲ್ಲಿ ಬೈಂದೂರು, ಕುಂದಾಪುರ, ಉಡುಪಿ, ಶಂಕರನಾರಾಯಣ, ಹೆಬ್ರಿ, ಕಾರ್ಕಳ, ಮೂಡಬಿದ್ರೆ, ವೇಣೂರು ಒಳಗೊಂಡಿದ್ದು ಇಲ್ಲಿಯ ಅರಣ್ಯ ನಾಶ ತಡೆಗಟ್ಟಲು ಕಾದಿರಿಸಿದ ಅನುದಾನ 3,50,000 ರೂ.ಗಳಾಗಿದ್ದು ಅದರಲ್ಲಿ 3,49,920 ರೂ.ಗಳು ಖರ್ಚಾಗಿದೆ. ಈಗ ಬೆಂಕಿಯನ್ನು ನಿಯಂತ್ರಣ ಮಾಡುವುದಕ್ಕೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಬೆಂಕಿ ನಿಯಂತ್ರಣ ಸಾಮಗ್ರಿಗಳನ್ನು ಒದಗಿಸಿದ್ದೇವೆ. ಇತ್ತೀಚೆಗೆ ಕುಂದಾಪುರ ಅರಣ್ಯ ವಲಯದಲ್ಲಿ ಕಾಡ್ಗಿಚ್ಚು ಉಂಟಾಗಿರುವ ಬಗ್ಗೆ ಯಾವುದೇ ವರದಿ ಬಂದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರಾದ ಪ್ರತಾಪ್‌ಚಂದ್ರಶೆಟ್ಟಿಯವರು ಅದರ ಬಗ್ಗೆ ವಿವರ ಕೇಳಿ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇವೆ.

ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ: ಅಧ್ಯಕ್ಷರೇ, ಕುಂದಾಪುರ ಅರಣ್ಯ ವಲಯದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಬೆಂಕಿ ಕಾಣಿಸುತ್ತದೆ, ಆದರೆ ಅಲ್ಲಿಗೆ ಅಧಿಕಾರಿಗಳು ಹೋಗುವುದಕ್ಕೆ ಆಗುವುದಿಲ್ಲ. ಪ್ರತಿ ಎರಡು ನಿಮಿಷಕ್ಕೊಂದು ಬಾರಿ ಬೆಂಕಿ ಬಿದ್ದಾಗ ಮರ ಬೀಳುವ ಶಬ್ದ ಕೇಳುತ್ತದೆ. ಇಂಥ ಪ್ರಕರಣಗಳನ್ನು ನಾವು ನೋಡುತ್ತಿದ್ದೇವೆ, ನಾನು ಕಳುಹಿಸಿರತಕ್ಕಂಥ ಟೆಲಿಗ್ರಾಮ್ ನಿಮ್ಮ ಇಲಾಖೆಯಲ್ಲಿ ಬಹುಶಃ ಇರಬಹುದು. ಏಕೆಂದರೆ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷಗಳಲ್ಲಿ ಇಂಥ ಕಾಡ್ಗಿಚ್ಚಿನ ಬಗ್ಗೆ ನಾನು ಕಳುಹಿಸಿರುವ ಟೆಲಿಗ್ರಾಮ್‌ಗಳು ನಿಮ್ಮ ಇಲಾಖೆಯಲ್ಲಿದೆ. ಅದರ ಹಿನ್ನೆಲೆಯಲ್ಲಿಯೇ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಒಂದು ವಾರದ ಹಿಂದೆ ಖಾಸಗಿಯವರು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡುವ ಸಲುವಾಗಿ ಬೆಂಕಿಯನ್ನು ಹಾಕಿದ್ದು, ನಿಮ್ಮ ಇಲಾಖಾ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿ ಅದರ ಬಗ್ಗೆ ಪೋಲಿಸ್ ಸ್ಟೇಶನ್‌ನಲ್ಲಿ ದೂರನ್ನು ಕೊಟ್ಟಿದ್ದು, ಆ ದೂರಿನ ಬಗ್ಗೆ ಪೋಲಿಸ್‌ನವರು ಯಾವುದೇ ಗಣನೆಗೆ ತೆಗೆದುಕೊಂಡಿಲ್ಲದಿರುವುದು, ಇವನ್ನೆಲ್ಲಾ ನಾನು ನೋಡಿದ್ದೇನೆ. ಆದುದರಿಂದಲೇ ನಾನು ಹೇಳಿದ್ದು, ನೀವು ತೆಗೆದುಕೊಂಡ ಕ್ರಮಗಳ ಬಗ್ಗೆ ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲವೆಂದು. ನೀವು ಅಂಕಿ ಸಂಖ್ಯೆಗಳನ್ನು ಕೊಡುವಾಗ ಎಷ್ಟು ಅನುದಾನ ಇಟ್ಟಿರುತ್ತೀರೋ ಅಷ್ಟೇ ಖರ್ಚಾಗಿದೆ ಎನ್ನುವ ಅಂಕಿಸಂಖ್ಯೆಯನ್ನು ಕೊಡುತ್ತೀರಿ. ಇದು ಎಷ್ಟು ಸಮರ್ಪಕವಾಗಿದೆ ಎಂದು ಹೇಳುವುದು ಬೇರೆ ವಿಚಾರ. ಆದುದರಿಂದ ಕೊಟ್ಟಿರತಕ್ಕಂಥ ವರದಿ ಮತ್ತು ಖರ್ಚು ಇಲಾಖಾ ವತಿಯಿಂದ ಸರಿಯಾಗಿ

ಆಗುತ್ತಿಲ್ಲ. ಈಗ ಏನು ಸಮೀಕ್ಷೆ ನಡೆದಿದೆ ಅದೂ ಕೂಡ ಸಮರ್ಪಕವಾಗಿ ಆಗುತ್ತಿಲ್ಲ. ಇದಲ್ಲದೇ ಇತ್ತೀಚಿನ ದಿನಗಳಲ್ಲಿ ನಡೆದ ಕಾಡ್ಗಿಚ್ಚಿನ ಪ್ರಕರಣದ ಬಗ್ಗೆ ಒಂದೂ ವರದಿ ಇಲ್ಲ. ಇದುವರೆಗೆ ಕಾಡ್ಗಿಚ್ಚಿನ ಬಗ್ಗೆ ತೆಗೆದುಕೊಂಡ ಮುಂಜಾಗ್ರತಾ ಕ್ರಮ ಕೂಡ ಸಮರ್ಪಕವಾಗಿಲ್ಲ.

ಶ್ರೀ ಡಿ.ಮಂಜುನಾಥ್: ಮಾನ್ಯ ಅಧ್ಯಕ್ಷರೇ, ಹಿಂದಿನ ವರ್ಷಗಳಲ್ಲಿ ನಡೆದಿರುವ ಕಾಡ್ಗಿಚ್ಚಿನ ಪ್ರಕರಣದ ಬಗ್ಗೆ ನನ್ನ ಬಳಿ ಮಾಹಿತಿ ಇಲ್ಲ. ಇತ್ತೀಚೆಗೆ ನಡೆದಿದೆ ಎನ್ನಲಾದ ಬೆಂಕಿ ಘಟನೆ ಬಗ್ಗೆ ಕೂಡ ನನ್ನ ಬಳಿ ಸಧ್ಯಕ್ಕೆ ಮಾಹಿತಿ ಇಲ್ಲ. ಅದರ ಬಗ್ಗೆ ಮಾಹಿತಿಯನ್ನು ತರಿಸುತ್ತೇನೆ ಮತ್ತು ಯಾವ ರೀತಿಯಲ್ಲಿ ನಿಯಂತ್ರಣ ಮಾಡಬಹುದೋ ಆ ರೀತಿಯಲ್ಲಿ ಇದನ್ನು ನಿಯಂತ್ರಣ ಮಾಡುವುದಕ್ಕೆ ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ಅದರ ಬಗ್ಗೆ ಪ್ರತಾಪ್‌ಚಂದ್ರ ಶೆಟ್ಟಿಯವರು ಯಾವುದೇ ಅನುಮಾನ ಪಡಬೇಕಾದ ಅವಶ್ಯಕತೆಯಿಲ್ಲ.

ವಿಷಯ: ಚಾಮರಾಜನಗರ ತಾಲ್ಲೂಕಿನ ಸಂತೆಮಾರನಹಳ್ಳಿ ವಿ.ಸ.ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು.

268 (1692)

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮರಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಸಂತೇಮಾರನಹಳ್ಳಿ ವಿಧಾನಸಭಾ ವ್ಯಾಪ್ತಿಗೆ ಬರುವ ದೊಡ್ಡರಾಯಪೇಟೆ ಆಲೂರು ಕಾಗಲವಾಡಿ ರಸ್ತೆ ಹಾಗೂ ಕವಲಂದೆ ಕೊಳ್ಳೇಗಾಲ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಬಾರ್ಡ್ ಯೋಜನೆಗೆ ಸೇರಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆ ಅಭಿವೃದ್ಧಿಗೆ ಹಣ ಮಂಜೂರಾಗಿದೆಯೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ದೊಡ್ಡರಾಯಪೇಟೆ-ಆಲೂರು-ಕಾಗಲವಾಡಿ ರಸ್ತೆ ಕಾಮಗಾರಿಯನ್ನು ನಬಾರ್ಡ್ ಸಾಲ ಮಂಜೂರಾತಿಗಾಗಿ ಪ್ರಸ್ತಾವಿಸಿದ್ದು ಒಪ್ಪಿತವಾಗಿರುವುದಿಲ್ಲ. ಕವಲಂದೆ ಕೊಳ್ಳೆಗಾಲ ರಸ್ತೆ ಕಾಮಗಾರಿಯನ್ನು ಪ್ರಸ್ತಾವಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ನಮ್ಮ [illegible] ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ರಸ್ತೆಗಳ ಬಗ್ಗೆ ಪ್ರಸ್ತಾವನೆ ಕಳೆದ